ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01

ಸಂಖ್ಯೆ: ಉನಿ(ಅಂ.ಅಂ)/ವಿ.ಸ./1950/ಚು.ರ/ಉ/2024-25 ದಿನಾಂಕ: 19.07.2024

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ, ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ) ರವರು ಕೇಳಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1950 ಕ್ಕೆ ಮಾಹಿತಿ ಒದಗಿಸುವ ಬಗ್ಗೆ.
ಉಲ್ಲೇಖ: ವಿಧಾನ ಸಭೆಯ ಪತ್ರದ ಸಂಖ್ಯೆ: ಪ್ರಶಾವಿಸ/16ನೇವಿಸ /4ನೇಅ/ಪ್ರ.ಸಂ.1950 ದಿನಾಂಕ: 13.07.2024.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ) ರವರು ಕೇಳಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1950 ಕ್ಕೆ ಮಾಹಿತಿಯನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ
ಕರ್ನಾಟಕ ವಿಧಾನ ಸಭೆ

1	ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:	1950
2	ಉತ್ತರಿಸಬೇಕಾದ ದಿನಾಂಕ:	24.07.2024
3	ಪ್ರಶ್ನೆ ಕೇಳಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು:	ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ)
4	ಉತ್ತರಿಸಬೇಕಾದ ಸಚಿವರು:	ಮಾನ್ಯ ಕೃಷಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಆಹಾರ ಧಾನ್ಯವಾದ ಭತ್ತವನ್ನು ಎಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಪ್ರಸ್ತುತ ಬೆಳೆಯಲಾಗುತ್ತಿದೆ; (ವಿವರ ನೀಡುವುದು)</td><td>2024ನೇ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಭತ್ತದ ಬೆಳೆಯ 10.60 ಲಕ್ಷ ಹೇಕ್ಟರ್ ಬಿತ್ತನೆ ಗುರಿಗೆ ದಿನಾಂಕ:18.07.2024ರವರೆಗೆ 1.40 ಲಕ್ಷ ಹೇಕ್ಟರ್ ರಷ್ಟು ಬಿತ್ತನೆ ಕೈಗೊಳ್ಳಲಾಗಿದೆ. ಭತ್ತ ಬೆಳೆಯ ಬಿತ್ತನೆ ಅವಧಿಯು ಆಗಸ್ಟ ಮಾಹೆಯ ಅಂತ್ಯದವರೆಗೂ ಇರುತ್ತದೆ.

ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>ಪ್ರತಿ ವರ್ಷ ರಾಜ್ಯದಲ್ಲಿ ಭತ್ತ ಬೆಳೆಯುವ ಪ್ರದೇಶದ ವಿಸ್ತೀರ್ಣದಲ್ಲಿ, ಆತಂಕಕಾರಿಯಾಗಿ ಕುಂಠಿತವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಆಹಾರ ಭದ್ರತೆ ಯೋಜನೆ ಸವಾಲನ್ನು ಎದುರಿಸುವ ಸಂಭವವಿದೆ ಎಂದು ಸರಕಾರ ಭಾವಿಸಿದೆಯೇ;</td><td>2018-19 ರಿಂದ 2023-24ರ ವರೆಗೆ ಭತ್ತ ಬೆಳೆಯ ವಿಸ್ತೀರ್ಣದ ಮಾಹಿತಿ ಈ ಕೆಳಗಿನಂತಿದೆ.

(ವಿಸ್ತೀರ್ಣ ಲಕ್ಷ ಹೆಕ್ಟೇರ್ ಗಳಲ್ಲಿ)
<table><tr><th>ವರ್ಷ /ಬೆಳೆ</th><th>ಭತ್ತ</th></tr><tr><td>2018-19</td><td>12.00</td></tr><tr><td>2019-20</td><td>12.48</td></tr><tr><td>2020-21</td><td>15.14</td></tr><tr><td>2021-22</td><td>14.87</td></tr><tr><td>2022-23</td><td>13.55</td></tr><tr><td>2023-24*</td><td>10.56</td></tr></table>ಮೂಲ:2018-19 ರಿಂದ 2022-23ರವರೆಗೆ ಅಂತಿಮ ಅಂದಾಜು ವರದಿ, 2023-24 3ನೇ ಮುಂಗಡ ಅಂದಾಜು ವರದಿ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

2023-24ನೇ ಸಾಲಿನ ಬೆಳೆ ವಿಸ್ತೀರ್ಣದ ಅಂತಿಮ ಅಂದಾಜು ವರದಿ ನಿರೀಕ್ಷೆಯಲ್ಲಿದೆ.

ಆಹಾರ ಭದ್ರತೆ ಯೋಜನೆ ವಿಷಯವು ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ.</td></tr>
</table>

ಇ)	ಭತ್ತ ಬೆಳೆಯುವುದನ್ನು, ಆಕರ್ಷಕ ಹಾಗೂ ಲಾಭದಾಯಕವೆಂದು ರೈತರನ್ನು ಮನವೊಲಿಸಲು, ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು).	ಕೇಂದ್ರ ಪುರಸ್ಕೃತ ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯಡಿ ಭತ್ತದ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆ (FNS)- ಅಕ್ಕಿ, ಕಾರ್ಯಕ್ರಮವನ್ನು ರಾಜ್ಯದ 7 ಜಿಲ್ಲೆಗಳಲ್ಲಿ (ಬೆಳಗಾವಿ, ದಕ್ಷಿಣ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ ಮತ್ತು ಯಾದಗಿರಿ) ಅನುಷ್ಠಾನ ಮಾಡಲಾಗುತ್ತಿದೆ. ಸದರಿ ಕಾರ್ಯಕ್ರಮದಡಿ ನೂತನ ತಳಿಗಳ ಬಳಕೆಯಿಂದ ಸುಧಾರಿತ ಪದ್ಧತಿ ಪ್ರಾತ್ಯಕ್ಷಿಕೆ, ಸಂಕರಣ/ಅಧಿಕ ಇಳುವರಿ ತಳಿಗಳ ಬಿತ್ತನೆ ಬೀಜಗಳ ವಿತರಣೆ, ಸಮಗ್ರ ಪೋಷಕಾಂಶಗಳು, ಪೀಡೆನಾಶಕಗಳು, ಸುಧಾರಿತ ಯಂತ್ರೋಪಕರಣಗಳು, ನೀರು ಒದಗಿಸುವ ಪೈಪುಗಳು, ಹಸಿರೆಲೆ ಗೊಬ್ಬರ ಬೀಜಗಳ ವಿತರಣೆಯನ್ನು ಶೇ 50ರ ಸಹಾಯಧನದಲ್ಲಿ ರೈತರಿಗೆ ನೀಡಲಾಗುತ್ತಿದೆ. ರಾಜ್ಯ ಸರ್ಕಾರದ ಬೀಜಗಳ ವಿತರಣೆ ಕಾರ್ಯಕ್ರಮದಡಿ ಭತ್ತದ ಬೀಜಗಳನ್ನು ರಿಯಾಯಿತಿ ದರದಲ್ಲಿ 5 ಎಕರೆಗಳವರೆಗೆ ವಿತರಣೆ ಮಾಡಲಾಗುತ್ತಿದೆ. ಭತ್ತ ಬೆಳೆಯನ್ನು ಬೆಳೆಯಲು ರೈತರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಇಲಾಖೆವತಿಯಿಂದ ವಿವಿಧ ಕಾರ್ಯಕ್ರಮ/ತರಬೇತಿಗಳಲ್ಲಿ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ.

ಕೃಷಿ ನಿರ್ದೇಶಕರು

ಅನುಬಂಧ (ಎಲ್.ಎ.ಕ್ಯೂ-1950)

ಜಿಲ್ಲಾವಾರು ಭತ್ತ ಬೆಳೆಯ ಗುರಿ ಹಾಗೂ ಸಾಧನೆಯ ವಿವರ ಈ ಕೆಳಕಂಡಂತಿದೆ

(ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)

ಕ್ರ. ಸಂ.	ಜಿಲ್ಲೆಗಳು	ಗುರಿ	ಸಾಧನೆ (ದಿನಾಂಕ: 18.07.2024ರವರೆಗೆ)
1	ಬಾಗಲಕೋಟೆ	0	32
2	ಬಳ್ಳಾರಿ	86734	0
3	ಬೆಳಗಾವಿ	62595	41077
4	ಬೆಂಗಳೂರು ಗ್ರಾಮಾಂತರ	169	0
5	ಬೆಂಗಳೂರು ನಗರ	206	0
6	ಬೀದರ್	819	435
7	ಚಾಮರಾಜನಗರ	11090	0
8	ಚಿಕ್ಕಬಳ್ಳಾಪುರ	2000	129
9	ಚಿಕ್ಕಮಗಳೂರು	16225	260
10	ಚಿತ್ರದುರ್ಗ	991	30
11	ದಕ್ಷಿಣ ಕನ್ನಡ	9390	1500
12	ದಾವಣಗೆರೆ	69234	0
13	ಧಾರವಾಡ	11525	10799
14	ಗದಗ	3306	1725
15	ಹಾಸನ	35726	120
16	ಹಾವೇರಿ	33715	14068
17	ಕಲಬುರಗಿ	8625	350
18	ಕೊಡಗು	29000	575
19	ಕೋಲಾರ	3521	11
20	ಕೊಪ್ಪಳ	62000	0
21	ಮಂಡ್ಯ	58562	0
22	ಮೈಸೂರು	89200	0
23	ರಾಯಚೂರು	185322	10992
24	ರಾಮನಗರ	3780	0
25	ಶಿವಮೊಗ್ಗ	74916	7490
26	ತುಮಕೂರು	3784	297
27	ಉಡುಪಿ	36509	26618
28	ಉತ್ತರಕನ್ನಡ	45550	16492
29	ವಿಜಯನಗರ	14000	2320
30	ವಿಜಯಪುರ	0	0
31	ಯಾದಗಿರಿ	101406.27	4739
	ರಾಜ್ಯ	**1059900**	**140059**

ಮೂಲ: ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ವಾರಾಂತ್ಯದ ವರದಿಗಳನ್ವಯ

ಜಂಟಿ ಕೃಷಿ ನಿರ್ದೇಶಕರು
(ಯೋಜನೆ)